ಸಾಕ್ಷಿಯನ್ನು ದಿಃ 27-02-2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಶ್ರೀಯುತ ಎಸ್ ಜೆ ಎಮ್ ವಕೀಲರಿಂದಃ**

ನಮ್ಮ ಕುಟುಂಬದಲ್ಲಿ ದಿ. 19-02-2004 ರಂದು ಆಗಿದ್ದ ಪಾಲು ವಿಭಾಗದ ಪ್ರಕಾರ ಆಯಾ ವ್ಯಕ್ತಿಗಳು ಅವರಿಗೆ ಬಂದ ಭಾಗಾಂಶಗಳ ಅನುಭವದಲ್ಲಿದ್ದರು ಎಂದರೆ ಸರಿ . ನನ್ನ ಹಿಸ್ಸೆಗೆ 43 ಸೆಂಟ್ಸ್ ಜಾಗ ಬಂದಿರುತ್ತದೆ. ಅದೇ ರೀತಿ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಂತಹ ಭಾಗಾಂಶ ಆಕೆಯ ಸ್ವಾಧೀನದಲ್ಲಿ ಈಗಲೂ ಇರುತ್ತದೆ. ಸದರಿ ಪಾಲುವಿಭಾಗದಲ್ಲಿ ಹಿಸ್ಸೆಗಳನ್ನು ಪಡೆದ ವ್ಯಕ್ತಿಗಳು ಎಲ್ಲರೂ ಈ ದಿನ ಆ ಭಾಗಾಂಶಗಳ ಸ್ವಾಧೀನ ಹೊಂದಿಲ್ಲ ಕಾರಣ ಕೆಲವರು ಅವರ ಪಾಲಿಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ . ನನ್ನ ಪ್ರಕಾರ ಪ್ರತಿವಾದಿ ಸಂ. 1 , 5 ಮತ್ತ 7 ರವರು ತಮ್ಮ ಭಾಗಾಂಶ ಮಾರಾಟ ಮಾಡಿದ್ದಾರೆ.

ಮೃತ ಕುಸುಮಾ ಶೆಟ್ಟಿ ಇವರು ತಮ್ಮ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ತಾವು ಕೊನೆಯವರೆಗೂ ಸ್ವಾಧೀನ ಹೊಂದಿದ್ದರು ಎಂದರೆ ಸರಿ , ಕುಸುಮಾ ಶೆಟ್ಟಿ ಇವರು ತೀರಿಹೋದ ನಂತರ ಅವರ ಹಿಸ್ಸೆಯ ಆಸ್ತಿಗಳಲ್ಲಿ ನಾವೆಲ್ಲರೂ ಅನುಭವ ಹೊಂದಿದ್ದೇವೆ. ಆದರೆ ಕುರಿತಾಗಿ ಸ್ವಾಧೀನವನ್ನು ಯಾರು ನಿರ್ದಿಷ್ಟವಾಗಿ ಹೊಂದಿದ್ದಾರೆಂದು ಹೇಳಲಾಗುವುದಿಲ್ಲ , ಸದರಿ ಜಾಗದಲ್ಲಿ ಎಷ್ಟು ಅಡಿಕೆ ಮತ್ತು ತೆಂಗಿನ ಮರಗಳಿವೆ ಎಂದು ನನಗೆ ಹೇಳಲಾಗುವುದಿಲ್ಲ, ಕುಸುಮಾ ಶೆಟ್ಟಿರವರಿಗೆ ಮಕ್ಕಳಿರಲಿಲ್ಲ. ಅವರು 8 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದರು. ಸಾಕ್ಷೀದಾರರಿಗೆ ಒಂದು ಉದಯವಾಣಿ ದಿನಪತ್ರಿಕೆಯ ತುಣುಕನ್ನು ತೋರಿಸಿ ಅದರಲ್ಲಿ ಕುಸುಮಾ ಶೆಟ್ಟಿ ಇವರ ಬಗ್ಗೆ ಶ್ರಧ್ಧಾಂಜಲಿ ವ್ಯಕ್ತಪಡಿಸಲಾಗಿದೆ ಎಂಬ ಸೂಚನೆಗೆ ಸ್ವಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಒಂದು ರಶೀದಿಯನ್ನು ತೋರಿಸಿದಾಗ ಅದರಲ್ಲಿ ಕುಸುಮಾ ಶೆಟ್ಟಿ ಇವರ ಹೆಸರು ರಶೀದಿಯಲ್ಲಿದೆ ಎಂದು ಒಪ್ಪಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಮತ್ತೊಂದು ಚೀಟಿಯನ್ನು ತೋರಿಸಿದಾಗ ಅದರಲ್ಲಿ ಸರೋಜಾ ರೈ ಇವರ ಹೆಸರು ಇದ್ದು ರೂ. 5000 ಹಣ ಕೊಟ್ಟ ಬಗ್ಗೆ ನಮೂದು ಇದ್ದು ಅದನ್ನು ತೋರಿಸಿದಾಗ ಸಾಕ್ಷಿದಾರರು ಅದು ಕುಸುಮಾ ಶೆಟ್ಟಿ ಇವರ ಉತ್ತರಕ್ರಿಯೆ ವಿಷಯಕ್ಕೆ ಸಂಬಂಧಿಸಿದ್ದು ಎಂದು ಒಪ್ಪಿದ್ದು ಅದನ್ನು ನಿಡಿ-3 ಎಂದು

ಗುರುತಿಸಲಾಯಿತು. ಸಾಕ್ಷಿದಾರರು ಮುಂದುವರಿದು 1 ನೇ ವಾದಿ ಕುಸುಮಾ ಶೆಟ್ಟಿಯವರನ್ನು ಆಸ್ಪತ್ರೆಗೆ ಸೇರಿಸಿದ್ದು, 1 ನೇ ವಾದಿ ಕ್ವಾರಂಟೈನ್‌ನಲ್ಲಿದ್ದ ಕಾರಣ 1 ನೇ ಪ್ರತಿವಾದಿಗೆ ಹಣ ಕೊಟ್ಟು ಪಾವತಿಸಲು ಹೇಳಿದ್ದರೆಂದು ನುಡಿಯುತ್ತಾರೆ. ನನಗೆ ಕುಸುಮಾ ಶೆಟ್ಟಿಯವರ ಎಲ್ಲಾ ವ್ಯವಹಾರಗಳ ಬಗ್ಗೆ ಮಾಹಿತಿ ಇಲ್ಲ , ಆದರೆ ಕೆಲವು ವ್ಯವಹಾರಗಳ ಬಗ್ಗೆ ಮಾಹಿತಿ ಇದೆ. ನಾನು ಕುಸುಮಾ ಶೆಟ್ಟಿಯವರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಒಂದು ದಾಖಲೆಯನ್ನು ತೋರಿಸಿದಾಗ ಅದರಲ್ಲಿ ಕಂಡುಬರುವ ಸಹಿಗಳನ್ನು ಕುಸುಮಾ ಶೆಟ್ಟಿಯವರದ್ದು ಅಲ್ಲ ಮತ್ತು ಅದರಲ್ಲಿ ಕಂಡುಬರುವ ಫೋಟೋಗಳು ತನಗೆ ಗುರುತಾಗುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿದಾರರಿಗೆ ಒಂದು ಫೋಟೋವನ್ನು ತೋರಿಸಿದಾಗ ಅದರಲ್ಲಿ ಕಡುನೀಲಿ ಸೀರೆ ಉಟ್ಟವರು ಕುಸುಮಾ ಶೆಟ್ಟಿಯವರು ಇದ್ದಾರೆ ಎಂದು ಒಪ್ಪುತ್ತಾರೆ. ಈ ಫೋಟೋವನ್ನು ಗುರುತಿಸುವಲ್ಲಿ ವಾದಿ ಪರ ವಕೀಲರು ತಕರಾರು ಎತ್ತಿದ್ದು ಸಕಾರಣವಿಲ್ಲದ ಕಾರಣ ತಳ್ಳಿಹಾಕಲಾಯಿತು ಮತ್ತು ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಅದೇ ರೀತಿ 2 ಫೋಟೋಗಳನ್ನು ತೋರಿಸಿದಾಗ ಅದರಲ್ಲಿ ಕುಸುಮಾ ಶೆಟ್ಟಿಯವರು ಇದ್ದಾರೆ ಎಂದು ಸಾಕ್ಷಿದಾರರು ಒಪ್ಪಿದ್ದು ಅವರ ಫೋಟೋಗಳನ್ನು ನೀಲಿ ಇಂಕಿನಿಂದ ಗುರುತಿಸಿದ್ದು ಅವುಗಳನ್ನು ನಿಡಿ-5 ಮತ್ತು 6 ಎಂದು ಗುರುತಿಸಲಾಯಿತು. ಮತ್ತೊಂದು ಫೋಟೋವನ್ನು ತೋರಿಸಿದಾಗ ಅದರಲ್ಲಿ ಕುಸುಮಾ ಶೆಟ್ಟಿಯವರು ನಿಂತಿದ್ದಾರೆ ಎಂದು ಸಾಕ್ಷಿದಾರರು ಒಪ್ಪಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ನಿಡಿ-4 ನ್ನು ತೋರಿಸಿದಾಗ ಸಾಕ್ಷಿದಾರರು 1 ನೇ ಪ್ರತಿವಾದಿಯ ಮಗ ನಿಖಿಲ್ ಇವರ ವಿವಾಹದಲ್ಲಿ ತೆಗೆದ ಫೋಟೋ ಅದು ಎಂದು ನುಡಿಯುತ್ತಾರೆ, ನಿಡಿ-5 ನ್ನು 1 ನೇ ಪ್ರತಿವಾದಿಯ ಮಗಳಾದ ನಿಧಿ ರೈ ಇವರ ವಿವಾಹದಲ್ಲಿ ತೆಗೆದಿದ್ದು ಎಂದು ನುಡಿಯುತ್ತಾರೆ.

ದಾವಾ ಸ್ಥಿರಾಸ್ತಿ ಬಗ್ಗೆ ತೀರುವೆಯನ್ನು ಸಾಕ್ಷೀದಾರರಿಗೆ ಒಟ್ಟು 11 ತೀರುವೆ ರಶೀದಿಗಳನ್ನು ತೋರಿಸಿದಾಗ ಅವುಗಳನ್ನು ನೋಡಿ ಸದರಿ ತೀರುವೆಗಳನ್ನು ಕುಸುಮಾ ಶೆಟ್ಟಿ ಇವರ ಆಸ್ತಿಗೆ ಸಂಬಂಧಪಟ್ಟಂತೆ ಪಾವತಿಸಿದ ತೀರುವೆಗಳು ಎಂದು ಒಪ್ಪಿದ್ದು ಅವುಗಳನ್ನು ಒಟ್ಟಾಗಿ ನಿಡಿ-8 ಎಂದು ಗುರುತಿಸಲಾಯಿತು. ವಾದಪತ್ರದ II (4) ನೇ

ಪ್ಯಾರಾದಲ್ಲಿ 1 ನೇ ಪ್ರತಿವಾದಿಯು ಸದರಿ ಕುಸುಮಾ ಶೆಟ್ಟಿ ಇವರು ತೀವ್ರ ಅನಾರೋಗ್ಯಕ್ಕೆ ಈಡಾಗಿ ಇದ್ದಾಗ ಸಹ ಆಕೆಯನ್ನು ನೋಡಲು ಬರಲಿಲ್ಲ ಎಂದು ಹೇಳಿರುವ ಉದ್ದೇಶ ಏನೆಂದರೆ 1 ನೇ ಪ್ರತಿವಾದಿ ಆ ಸಮಯದಲ್ಲಿ ಕುಸುಮಾ ಇವರನ್ನು ನೋಡಲು ಬಂದಿರಲಿಲ್ಲ. 1 ನೇ ವಾದಿಯು ಕುಸುಮಾ ಶೆಟ್ಟಿಯವರನ್ನು ಆಸ್ಪತ್ರೆಗೆ ಆ ಸಮಯದಲ್ಲಿ ಕರೆದುಕೊಂಡು ಹೋಗಿದ್ದರು. ಸಾಕ್ಷಿದಾರರಿಗೆ ವಾದಪತ್ರವನ್ನು ತೋರಿಸಿ ವಾದಿ ಮತ್ತು ಪ್ರತಿವಾದಿಯ ಹೆಸರುಗಳನ್ನು ಗಮನಕ್ಕೆ ತಂದಾಗ ಅವರಲ್ಲಿ 1 ನೇ ವಾದಿಯ ಮಗಳು ಸಂಧ್ಯಾ ರೈ ಮಾತ್ರ ಬಂದಿದ್ದರು ಎಂದು ನುಡಿದಿದ್ದು ಉಳಿದವರು ಬೇರೆ ಬೇರೆ ಕಡೆ ಕೆಲಸದಲ್ಲಿರುವ ಕಾರಣ ಬರಲು ಆಗಿರಲಿಲ್ಲ ಎಂದು ನುಡಿಯುತ್ತಾರೆ, 1 ನೇ ಪ್ರತಿವಾದಿ ಕುಸುಮಾ ಶೆಟ್ಟಿಯವರನ್ನು ನೋಡಲು ಬಂದಿರಲಿಲ್ಲ ಎಂಬ ವಿಷಯವನ್ನು ವಿಶೇಷವಾಗಿ ಹೇಳುವ ಅಗತ್ಯವೇನಿತ್ತು ಎಂಬ ಪ್ರಶ್ನೆಗೆ ಸಾಕ್ಷಿದಾರರು ಒಂದು ಮತ್ತು 2 ನೇ ವಾದಿ ಹಾಗೂ 1 ನೇ ಪ್ರತಿವಾದಿ ಇವರು ಪದ್ಮಾವತಿಯವರ ಹೆಣ್ಣು ಮಕ್ಕಳಾಗಿದ್ದು ನಾವೆಲ್ಲರೂ ಅವರ ಸೊಸೆಯಂದಿರಾಗಿದ್ದ ಕಾರಣ ಆ ರೀತಿ ಹೇಳಲಾಗಿದೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗೆ

ಕಾಲಾವಕಾಶ ಕೋರಿದ್ದು : ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು, ದ.ಕ.